# ಪುರುಷಾರ್ಥ ಪರಿಕಲ್ಪನೆ

ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ದ ನಾಲ್ಕನೇ ಪದ್ಯದಿಂದ ಹಲವು ಪದ್ಯಗಳ ಉದ್ದಕ್ಕೂ ಪ್ರಶ್ನೆಗಳು ಇಡಿಕಿರಿದು ತುಂಬಿವೆ. 'ಏನು ಜೀವನದರ್ಥ? ಏನು ಪ್ರಪಂಚಾರ್ಥ...?' ಎಂಬಂಥ ಈ ಪ್ರಶ್ನೆಗಳು ಎಲ್ಲ ಚಿಂತನಶೀಲರನ್ನೂ ಕಾಡಿಸುವಂಥವು. ಅವುಗಳಿಗೆ ನಿರ್ದಿಷ್ಟ ಉತ್ತರವೆಂಬುದಿಲ್ಲ. ಒಬ್ಬೊಬ್ಬನೂ ತನ್ನ ಅನುಭವ, ಸಂಸ್ಕಾರಗಳ ಹಿನ್ನೆಲೆಯಲ್ಲಿ ತನ್ನ ಪಾಲಿನ ಉತ್ತರವನ್ನು ತಾನೇ ಕಂಡುಕೊಳ್ಳಬೇಕಾದುದು ಅನಿವಾರ್ಯ.

ಆದರೆ ಭಾರತೀಯ ಮನಸ್ಸು ಇಂಥ ಪ್ರಶ್ನೆಗಳಿಗೆ ಸರ್ವರಿಗೂ ಅನ್ವಯ ಆಗಬಹುದಾದಂಥ ಹಾಗೂ ಅನುಷ್ಠಾನ ಸಾಧ್ಯತೆಯಿರುವಂಥ ಉತ್ತರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದೆ. ಆ ಪ್ರಯತ್ನದ ಫಲವೇ ಪುರುಷಾರ್ಥಗಳ ಪರಿಕಲ್ಪನೆ. ಪುರುಷಾರ್ಥಗಳೆಂದರೆ ಮನುಷ್ಯನ ಬದುಕಿನ ಉದ್ದೇಶಗಳು ಅಥವಾ ಗುರಿಗಳು ಎಂದು ಸ್ಥೂಲವಾಗಿ ಅರ್ಥೈಸಬಹುದು. ನಮ್ಮ ಹಿರಿಯರು ಇಂಥ ಉದ್ದೇಶಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ, ಅವುಗಳಿಗೆ 'ಚತುರ್ವಿಧ ಪುರುಷಾರ್ಥಗಳು' ಎಂದಿದ್ದಾರೆ. ಧರ್ಮ, ಅರ್ಥ, ಕಾಮ, ಮೋಕ್ಷ ಎಂದು ಪುರುಷಾರ್ಥಗಳನ್ನು ವಿಂಗಡಿಸಿರುವುದರ ಹಿನ್ನೆಲೆಯಲ್ಲಿ ಒಂದು ತಾರ್ಕಿಕ ದೃಷ್ಟಿಕೋನ ಇರುವುದನ್ನು ಗಮನಿಸಬಹುದು. ಪುರುಷಾರ್ಥಗಳಲ್ಲಿ ಧರ್ಮಕ್ಕೆ ಮೊದಲ ಸ್ಥಾನ. 'ಧರ್ಮ' ಎನ್ನುವ ಮಾತು ಅತ್ಯಂತ ವ್ಯಾಪಕಾರ್ಥ ಇರುವಂಥದು; ಲೌಕಿಕದಿಂದ ಅಲೌಕಿಕದವರೆಗೆ ಚಾಚಿಕೊಂಡಿರುವಂಥದ್ದು. ತಾನೂ ಬದುಕಿ, ಇನ್ನೊಬ್ಬರನ್ನೂ ಬದುಕಲು ಅವಕಾಶ ಮಾಡಿಕೊಡುವ ಲೋಕ ಹಿತಪ್ರಜ್ಞೆ. ಸ್ವಾರ್ಥ, ಅಸೂಯೆ, ದ್ವೇಷ, ಹಿಂಸೆ ಇತ್ಯಾದಿಗಳನ್ನು ದೂರವಿರಿಸಿ ತ್ಯಾಗ, ಪ್ರೀತಿ, ಅಹಿಂಸೆ, ಅನುಕಂಪ ಮುಂತಾದ ಮಾನವೀಯ ಗುಣಗಳನ್ನು ಅನುಸರಿಸಿ ಬದುಕುವ ಜೀವನ ಶೈಲಿ– ಈ ಎಲ್ಲವೂ 'ಧರ್ಮ' ಎಂಬುದರಲ್ಲಿ ಅಡಕವಾಗಿವೆ. ಧರ್ಮದ ಬುನಾದಿಯ ಮೇಲೆಯೇ ಮನುಷ್ಯನ ಬದುಕು ನೆಲೆಗೊಳ್ಳಬೇಕೆಂಬ ಕಾರಣದಿಂದಲೇ ಪುರುಷಾರ್ಥಗಳಲ್ಲಿ ಅದಕ್ಕೆ ಮೊದಲ ಸ್ಥಾನ.

ಎರಡನೆಯದು 'ಅರ್ಥ'. ಇಲ್ಲಿ ಅರ್ಥವೆಂದರೆ ಸಂಪತ್ತು ಎಂದೇ ವಿವಕ್ಷಿಸಬೇಕು. ಇದು ಬದುಕಿನ ನಿರ್ವಹಣೆಗೆ ಹಾಗೂ ಆಸ್ವಾದಕ್ಕೆ ಅತ್ಯಂತ ಅಗತ್ಯವಾಗಿರುವಂಥದು. ಹೀಗಾಗಿ ಹಣವನ್ನೂ, ತನ್ಮೂಲಕ ಸಂಪತ್ತನ್ನೂ ಗಳಿಸುವುದು ಎಲ್ಲರ ಪಾಲಿಗೂ ಅನಿವಾರ್ಯ. ಕೆಲವರು ಸ್ವಂತ ದುಡಿಮೆಯಿಂದ, ಪ್ರಾಮಾಣಿಕ ಪ್ರಯತ್ನದಿಂದ ಹಣ ಸಂಪಾದಿಸುತ್ತಾರೆ; ಇನ್ನು ಕೆಲವರು ಯಾವ್ಯಾವುದೋ ವಾಮ ಮಾರ್ಗಗಳಿಂದ ಸಂಪಾದಿಸುತ್ತಾರೆ. ಕೆಲವರಿಗೆ ಎಷ್ಟು ಹಣ ಗಳಿಸಿದರೂ ತೃಪ್ತಿಯಿಲ್ಲ. ಹಣ ಸಂಪಾದನೆ ಧರ್ಮದ ಚೌಕಟ್ಟಿನಲ್ಲಿ, ನ್ಯಾಯ ಮಾರ್ಗದಲ್ಲಿ ನಡೆದಾಗ ಮಾತ್ರ ಅದು ಒಂದು 'ಪುರುಷಾರ್ಥ'ವೆನ್ನಿಸಿಕೊಳ್ಳುತ್ತದೆ.

'ಕಾಮ'ವೆಂಬುದು ತೃತೀಯ ಪುರುಷಾರ್ಥ. ಹೆಣ್ಣು ಗಂಡುಗಳ ನಡುವಣ ಆಕರ್ಷಣೆ ಎಂಬುದಷ್ಟೇ ಕಾಮವಲ್ಲ. ಮನುಷ್ಯನಲ್ಲಿ ಸಹಜವಾಗಿರುವ ಎಲ್ಲ ಬಯಕೆಗಳೂ ಕಾಮವೇ. ಚೆನ್ನಾಗಿ ಬದುಕಬೇಕು; ಬದುಕಿನಲ್ಲಿ ದೈಹಿಕ ಹಾಗೂ ಭಾವನಾತ್ಮಕ ಸುಖವನ್ನು ಅನುಭವಿಸಬೇಕು; ಈ ಕಾರಣಕ್ಕಾಗಿ ಅಗತ್ಯವಿರುವ ವಸ್ತು, ವ್ಯಕ್ತಿ ಇತ್ಯಾದಿಗಳನ್ನು ಸಂಪಾದಿಸಿ, ಉಪಭೋಗಿಸಬೇಕು– ಈ ಎಲ್ಲ 'ಬೇಕು'ಗಳೂ ಕಾಮದ ಬೇರೆ ಬೇರೆ ಮುಖಗಳು. ಕಾಮವೆಂಬುದು ಬದುಕಿಗೊಂದು ಗೆಲವನ್ನೂ ಚೆಲುವನ್ನೂ ತಂದುಕೊಡುತ್ತದೆ. ಆದ್ದರಿಂದ ಅದು ವರ್ಜ್ಯವಲ್ಲ, ತಿರಸ್ಕಾರಾರ್ಹವೂ ಅಲ್ಲ. ಆದರೆ ಅದು ಧರ್ಮಕ್ಕೆ ವಿರುದ್ಧವಾಗಬಾರದು ಎಂಬ ಎಚ್ಚರ ಎಲ್ಲರಲ್ಲೂ ಇರಬೇಕು.

ಅರ್ಥ, ಕಾಮಗಳ ಒತ್ತಾಸೆ ಇಲ್ಲದ ಜೀವನ ನೀರಸವಾಗುತ್ತದೆ. ಅವುಗಳ ಅನುಪಸ್ಥಿತಿ ಬದುಕಿನ ಸಾತತ್ಯವನ್ನೂ ಭಂಗಗೊಳಿಸುವ ಸಾಧ್ಯತೆ ಇದೆ. ಆದರೆ ಅವು ಧರ್ಮಸಮ್ಮತವಾದ ಋಜುಮಾರ್ಗದಲ್ಲಿ ಪೂರೈಸಲ್ಪಡಬೇಕು. ಆದ್ದರಿಂದಲೇ ನಮ್ಮ ಪಂಪ ಕವಿ– 'ಧರ್ಮಂ ಪ್ರಧಾನಂ; ಅರ್ಥಂ ಧರ್ಮಾಪ್ತಿಪ್ರಫಳಂ, ಅದರ್ಕೆ ರಸಮದು ಕಾಮಂ' ಎಂದಿರುವುದು.

ಧರ್ಮ, ಅರ್ಥ, ಕಾಮ– ಈ ಮೂರನ್ನು ನಮ್ಮ ಹಿರಿಯರು 'ತ್ರಿವರ್ಗ'ವೆಂದು ಕರೆದಿದ್ದಾರೆ. ಅವೆಲ್ಲವೂ ನಮ್ಮ ಇಹಲೋಕದ ಬದುಕಿಗೆ ಸಂಬಂಧಿಸಿದಂಥವು. ನಾಲ್ಕನೆಯ ಪುರುಷಾರ್ಥವಾದ ಮೋಕ್ಷ ಭೂಮಿಯ ಮೇಲಿನ ಬದುಕು ಮುಗಿದ ನಂತರ ಎಟುಕಿಸಿಕೊಳ್ಳಬೇಕಾದ ಪಾರಲೌಕಿಕ ಪುರುಷಾರ್ಥ. ಆದ್ದರಿಂದಲೇ ಅವನ್ನು 'ಅಪವರ್ಗ' ಎನ್ನುತ್ತಾರೆ. ಮೋಕ್ಷವೆಂದರೆ ಜನನ ಮರಣಗಳ ಚಕ್ರದಿಂದ ಬಿಡುಗಡೆ ಹೊಂದಿ, ನಿರಾಕುಲ ಸ್ಥಿತಿಯನ್ನು ತಲುಪುವುದು ಎನ್ನುತ್ತಾರೆ ವೇದಾಂತಿಗಳು. ಅದು ಲೌಕಿಕದಾಚೆಗಿನ ಪ್ರಪಂಚಕ್ಕೆ ಸೇರಿರುವುದರಿಂದ ಅದೊಂದು ಅಮೂರ್ತ ಪರಿಕಲ್ಪನೆ. ಇಹದ ಬದುಕಿನ ಹಾದಿ ಚೆಲುವಾಗಿರಲು ಧರ್ಮ, ಅರ್ಥ, ಕಾಮ– ಈ ಮೂರು ಪುರುಷಾರ್ಥಗಳನ್ನು ನಿಜವಾದ ಅರ್ಥದಲ್ಲಿ ನಮ್ಮದಾಗಿಸಿಕೊಳ್ಳಬೇಕು.

■ ವೈನತೇಯ

## ಮಾತೇ ಮುತ್ತು

★ ಎಡವಿದವನು ಒಬ್ಬೊಬ್ಬನೂ ವಧ್ಯನೆಂಬುದೇ ನಿಶ್ಚಯವಾಗಿಬಿಟ್ಟರೆ ಲೋಕದಲ್ಲಿ ಇಬ್ಬರು ಅಥವಾ ಮೂರು ಜನ ಉಳಿದಾರು! ಮನುಷ್ಯರೆಲ್ಲಾ ಎಷ್ಟಾದರೂ ಹೆಚ್ಚು ದೋಷಗಳುಳ್ಳವರೇ!

–ಮಹಾಭಾರತ

★ ಸಾಹಿತ್ಯ, ಸಂಗೀತ, ಕಲೆಗಳನ್ನು ಕಲಿಯದವನು ಬಾಲ, ಕೊಂಬುಗಳಿಲ್ಲದ ಸಾಕ್ಷಾತ್ ಪಶು. ಹುಲ್ಲು ತಿನ್ನದೆಯೇ ಅವನು ಜೀವಿಸುವುದು ಪಶುಗಳ ಪರಮಭಾಗ್ಯ!

–ನೀತಿ ಶತಕ

★ ಮಾತನಾಡುವ ಸಾಮರ್ಥ್ಯವಿದ್ದರೂ ವ್ಯರ್ಥವಾದ ಯಾವ ಮಾತನ್ನೂ ಆಡದಿರುವವನು ಮೌನಿ.

–ಮಹಾತ್ಮ ಗಾಂಧೀಜಿ

★ ಅರಸನಾದವನು ಆಳಬೇಕು, ಅಳಬಾರದು. ಅಳೋ ಸಮಯ ಬಂದರೂ ಅದು ಮನಸ್ಸಿನಲ್ಲೇ ಇರಬೇಕು. ಕಣ್ಣಲ್ಲಿ, ಮುಖದಲ್ಲಿ ಕಾಣಿಸಬಾರದು.

–ತ.ರಾ.ಸು.

★ ದಡ್ಡನಾದರೂ ನಾಲಿಗೆ ಬಿಗಿ ಹಿಡಿದರೆ ಅವನೂ ವಿವೇಕಿ ಎನ್ನಿಸಿಕೊಳ್ಳುತ್ತಾನೆ.

–ಸೆನಕ

★ ಯುದ್ಧ ಮಾಡುವವು ಶಸ್ತ್ರಗಳಲ್ಲ, ಶಸ್ತ್ರಗಳ ಹಿಂದಿನ ಶಕ್ತಿಗಳು; ಅದಕ್ಕಿಂತ ಖಚಿತವಾಗಿ ಹೇಳುವುದಾದರೆ– ನಾವು ಒಪ್ಪಿಕೊಂಡ ಜೀವನ ಕ್ರಮ.

–ಪಿ.ಲಂಕೇಶ್

★ ಯುದ್ಧ ಮಾಡುವವನು ತಾನು ಯಾಕೆ ಯುದ್ಧ ಮಾಡುತ್ತಿದ್ದೇನೆ ಎನ್ನುವ ಕಾರಣವನ್ನು ಸ್ಪಷ್ಟವಾಗಿ, ಪ್ರಾಮಾಣಿಕವಾಗಿ ತಿಳಿದಿರಬೇಕು. ಅಂತರಂಗದ ನಿಷ್ಠೆ ಇಲ್ಲದಿದ್ದರೆ ದೇಹಧೈರ್ಯ ಎಲ್ಲಿಂದ ಬರುತ್ತದೆ?

–ಎಸ್.ಎಲ್.ಭೈರಪ್ಪ

★ ಅಳದ ಯುವಕ ಅನಾಗರಿಕ! ನಗದ ಮುದುಕ ದಡ್ಡ!

–ಗಾದೆ

★ ನನಗೆ ಗುಲಾಬಿ ಹೂವು ಎಷ್ಟು ಪ್ರಿಯವೋ, ಕಳ್ಳಿಯ ಪೊದೆ ಕೂಡ ಅಷ್ಟೇ ಪ್ರಿಯ.

–ಕೆ.ಕೆ.ಹೆಬ್ಬಾರ

★ ಅಜೀರ್ಣವಾದ ಸಮಯದಲ್ಲಿ ಹಿತಕರವಾಗಿರುವ ಅನ್ನವೂ ಕೂಡ ವ್ಯಾಧಿಗೆ ಅಥವಾ ಮರಣಕ್ಕೆ ಕಾರಣವಾಗುತ್ತದೆ.

–ಬೇತಾಳ ಪಂಚವಿಂಶತಿ

★ ಹರ ಕೊಲ್ಲಲ್ ಪರ ಕಾವನೇ.

–ಪಾಲ್ಕುರಿಕೆ ಸೋಮನಾಥ

★ ಮುದುಕ ತನ್ನ ಹಿಂದಿರುವುದನ್ನು, ಯುವಕ ತನ್ನ ಮುಂದಿರುವುದನ್ನು ನೋಡುವುದಕ್ಕಿಂತ ಚೆನ್ನಾಗಿ ನೋಡುತ್ತಾನೆ.

–ಜರ್ಮನ್ ಗಾದೆ

★ ಒಬ್ಬನಿಗೆ ಗೊತ್ತಿರುವ ಗುಟ್ಟು, ಯಾರಿಗೂ ಗೊತ್ತಿರದ ಗುಟ್ಟು; ಇಬ್ಬರಿಗೆ ಗೊತ್ತಾದ ಗುಟ್ಟು ರಟ್ಟಾದ ಗುಟ್ಟೇ.

–ಸ್ವೀಡಿಶ್ ಗಾದೆ